ವಿಷಯ ...Construction of RO Plant... ಪುಟದ ಸಂಖ್ಯೆ .....

...in ward no-03... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ:- Construction of RO plant in ward no -03.

****

1) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ವಲಯ, ಯಲಹಂಕ ಉಪನಗರ ಉಪವಿಭಾಗ, ಅಟ್ಟೂರು, ವಾರ್ಡ್ ನಂ:03 ರಲ್ಲಿ ಬರುವ ಕೆಲವು ಬಡಾವಣೆಗಳಲ್ಲಿ ಜನಸಾಂದ್ರತೆ ಹೆಚ್ಚಾಗಿದ್ದು ನೀರಿನ ಅಭಾವ ಉಂಟಾಗಿರುವುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಬೋರ್‌ವೆಲ್ ಮುಖಾಂತರ ಕುಡಿಯುವ ನೀರನ್ನು ಒದಗಿಸುತ್ತಿದ್ದು. ಬೋರ್‌ವೆಲ್ ನೀರಿನಲ್ಲಿ ಕಬ್ಬಿಣದ ಲವಣಾಂಶ ಇರುವುದರಿಂದ ಸಾರ್ವಜನಿಕರ ಆರೋಗ್ಯಕ್ಕೆ ತೊಂದರೆಯಾಗುತ್ತಿರುವುದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಆರ್.ಓ.ಪ್ಲಾಂಟ್ ನಿರ್ಮಿಸಲು ಯಲಹಂಕ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಮತ್ತು ಬಿ.ಬಿ.ಎಂ.ಪಿ ಸದಸ್ಯರು **ಸದರಿ ಕಾಮಗಾರಿಯನ್ನು** 2018-19ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಸೇರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ತಿಳಿಸಿರುತ್ತಾರೆ.

2) ಅದರಂತೆ, ಸ್ಥಳ ಪರಿವೀಕ್ಷಣೆ ಮಾಡಿ ಈ ಮೇಲ್ಕಂಡ ಕಾಮಗಾರಿಯನ್ನು 2018-19ನೇ ಸಾಲಿನ ಆಯವ್ಯಯದಲ್ಲಿ ಸೇರಿಸಿ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ.15.00ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ 2018-19ನೇ ಸಾಲಿನಲ್ಲಿ ಮಂಜೂರಾಗಿರುವ ದರಪಟ್ಟಿಯಂತೆ ತಯಾರಿಸಲಾಗಿದೆ. ಸದರಿ ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿರುತ್ತದೆ.

1. ಅಡಿಪಾಯಕ್ಕಾಗಿ ಮಣ್ಣಿನ ಅಗೆತ
2. ಅಗೆದ ಮಣ್ಣನ್ನು ಹೊರಸಾಗಿಸುವುದು
3. ಸಿಮೆಂಟ್ ಕಾಂಕ್ರೀಟ್ 1:4:8 ನ್ನು ಅಳವಡಿಸುವುದು
4. ಫ್ಲಸ್ ಪಾಯಿಂಟಿಂಗ್‌ನ್ನು ಅಳವಡಿಸುವುದು.
5. ಎಂ.20 ಓ.ಪಿ.ಸಿ.ಸಿಮೆಂಟ್‌ನ್ನು ಅಳವಡಿಸುವುದು
6. ಸೆಂಟರಿಂಗ್ ಮತ್ತು ಶಟ್ಟರಿಂಗ್ ಅಳವಡಿಸುವುದು.
7. ಸಲಿಡ್ ಬ್ಲಾಕ್‌ನ್ನು ಅಳವಡಿಸುವುದು
8. ಟಿ.ಎಂ.ಟಿ. ಸ್ಟೀಲ್‌ನ್ನು ಹಾಕುವುದು.
9. ಸಿಮೆಂಟ್ ಮೋರ್ಟಾರ್ 1:6 ನ್ನು ಹಾಕುವುದು.
10. ಆರ್.ಓ ಪ್ಲಾಂಟ್‌ಗೆ ಎಲೆಕ್ಟ್ರಿಕಲ್ ವೈಯರಿಂಗ್ ಮತ್ತು ಲೀಟಿಂಗ್ ಅಳವಡಿಸುವುದು ಇತ್ಯಾದಿ.,

3) ಮೇಲ್ಕಂಡ ಎಲ್ಲಾ ಅಂಶಗಳು ಸದರಿ ಕಾಮಗಾರಿಗೆ ಬಹಳ ಅವಶ್ಯಕವಾಗಿರುತ್ತದೆ. ಆದ್ದರಿಂದ ಇವುಗಳನ್ನು ಅಳವಡಿಸಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಈ ಕಾಮಗಾರಿಗೆ 2018-19ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆಯಡಿಯ ಕಾರ್ಯಕ್ರಮದ ಪಿ-3445 ರ ಅಡಿಯಲ್ಲಿ 003-19-000058 ರಂತೆ ಕಾಮಗಾರಿಯ ಸಂಕೇತ ದೊರೆತಿದ್ದು ಕೆಲಸವನ್ನು ಪರ್ತಾಗಿ ತೆಗೆದುಕೊಳ್ಳಬೇಕಾಗಿರುವುದರಿಂದ ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ಮುಖಾಂತರ ನಿರ್ವಹಿಸಲು ಅನುಮತಿ ನೀಡಬೇಕಾಗಿ ಕೋರಿದೆ.

AE-3

ಪಂಕ್ತಿಯ ಸಂಖ್ಯೆ

ಈ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕೆ ಮಂಡಿಸಿದೆ.

ಸ.ಕಾ.ಅ (ಯ.ಉ.ವಿ)

A) ಸ.ಅ (ವಾರ್ಡ್ ಇವರಿಗೆ)

B) ಕಾ.ಇ (ಯು.ಪಿ)

C) D.M). ಕಂಡಿಕೆ (2) ರಿಂದ (4) ರವರೆಗಿನ ಅಭಿಪ್ರಾಯಗಳಿಂದ ತಮ್ಮ ಮುಂದಿನ ಆದೇಶಕ್ಕಾಗಿ ಕಡತ ಸಲ್ಲಿಸಿದೆ.

Executive Engineer
Yelahanka Division
Yelahanka Zone
Bruhat Bangalore Mahanagara Palike
BANGALORE 560064

ಮುಖ್ಯ ಅಭಿಯಂತರರ ಕಛೇರಿ
04 MAY 2019
ಬಿ.ಬಿ.ಎಂ.ಪಿ,ಯಲಹಂಕ ವಲಯ.

ಮುಂದಿನ

(9) ಮು.ಅ (ಯು.ವ)

(10) EE (ಎಸ್.ಜಿ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

(11) ಕಂಡಿಕೆ (8) ರಲ್ಲಿ ಮಧ್ಯಾಹ್ನ 15.00 ಗಂಟೆಯ ನಂತರ ಸಲ್ಲಿಸಿದ ಟೆಂಡರ್‌ಗಳನ್ನು ಪರಿಗಣಿಸಲು ಅವಕಾಶವಿಲ್ಲ ಎಂಬ ಷರತ್ತಿಗೆ ವಿರುದ್ಧವಾಗಿ ಕೆ.ಆರ್.ಐ.ಡಿ.ಎಲ್ ಸುತ್ತೋಲೆ ದಿನಾಂಕ 20.12.2018ರ ಪ್ರಕಾರ ಮಧ್ಯಾಹ್ನ 15.00 ಗಂಟೆಯ ನಂತರ ಸಲ್ಲಿಸಿದ ಟೆಂಡರ್‌ಗಳನ್ನು ಪರಿಗಣಿಸಲು ಅವಕಾಶವಿರುವುದರಿಂದ ಸದರಿ ಷರತ್ತನ್ನು ತೆಗೆದು ಹಾಕಲು ಕೋರಿದೆ.

Executive Engineer
Yelahanka Division
Yelahanka Zone
Bruhat Bangalore Mahanagara Palike
BANGALORE 560064

(12) ಕಂಡಿಕೆ (8) ರಲ್ಲಿ (11) ರಲ್ಲಿ ಉಲ್ಲೇಖಿಸಿರುವಂತೆ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕದಂದು ಮಧ್ಯಾಹ್ನ 15.00 ಗಂಟೆಯ ನಂತರ ಸಲ್ಲಿಸಿದ ಟೆಂಡರ್‌ಗಳನ್ನು ಪರಿಗಣಿಸಲು ಅವಕಾಶವಿಲ್ಲ ಎಂಬ ಷರತ್ತಿಗೆ ವಿರುದ್ಧವಾಗಿ 'KRIDL' ಸುತ್ತೋಲೆಯಂತೆ ಮಧ್ಯಾಹ್ನ 15.00 ಗಂಟೆಯ ನಂತರ ಸಲ್ಲಿಸಿದ ಟೆಂಡರ್‌ಗಳನ್ನು ಸ್ವೀಕರಿಸಲು ಅವಕಾಶವಿರುವುದರಿಂದ ಸದರಿ ಷರತ್ತನ್ನು ತೆಗೆದು ಹಾಕಲು ಕೋರಿದೆ.

Executive Engineer
Yelahanka Division
Yelahanka Zone
Bruhat Bangalore Mahanagara Palike
BANGALORE 560064

(13) ಮುಂದಿನ (ಅನ್ವಯ)]

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ:-

ವಿಷಯ:-ಟೆಂಡರ್ ನೋಟೀಪಿಕೇಷನ್‌ನಂ:BBMP/EE/YNK.D/E-PMT/ 10/2019-20 Dated:04-10-2019 ರಂದು ಕರೆಯಲಾಗಿದ್ದ ಟೆಂಡರ್ ಮೌಲ್ಯಮಾಪನದ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 2018-19ನೇ ಸಾಲಿನ ವಾರ್ಷಿಕ ಆಯವ್ಯಯದ ಲೆಕ್ಕಶೀರ್ಷಿಕೆ ಪಿ3445 ರಡಿಯಲ್ಲಿ ವಾರ್ಡ್ ನಂ:03ರಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ನಿರ್ಮಾಣ ಮಾಡುವ ಕಾಮಗಾರಿಗೆ ರೂ.15.00ಲಕ್ಷಗಳು ಮಂಜೂರಾಗಿದ್ದು ಅದರಂತೆ ಟೆಂಡರ್ ನೋಟೀಪಿಕೇಷನ್‌ನಂ: BBMP/EE/YNK.D/E-PMT/ 10/2019-20 Dated:04-10-2019 ರಲ್ಲಿ ಇ-ಪ್ರಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದ್ದ ಟೆಂಡರ್‌ನಲ್ಲಿ ಒಟ್ಟು ಮೂರುಜನ ಬಿಡ್ದುದಾರರು ಭಾವಹಿಸಿದ್ದು ವಿವರ ಈ ಕೆಳಕಂಡಂತೆ ಇರುತ್ತದೆ.

1.	ಕಾಮಗಾರಿಯ ಅಂದಾಜು ಮೊತ್ತ	:	15.00 ಲಕ್ಷ
2.	ಟೆಂಡರ್‌ಗಿಟ್ಟ ಮೊತ್ತ	:	12.95 ಲಕ್ಷ
3.	ಅನುದಾನ	:	P3445(Establishment of RO Plant)
4.	ಕಾಮಗಾರಿ ಸಂಕೇತ ಸಂಖ್ಯೆ	:	003-19-000058
5.	ಟೆಂಡರ್‌ನ ಸ್ವರೂಪ	:	ಐಟಂವಾರು
6.	ಟೆಂಡರ್ ನೋಟಿಫಿಕೇಷನ್ ಸಂಖ್ಯೆ	:	EE/YNK/BBMP/E-PMT/10/2019-20 Dt: 04-10-2019
7.	ಟೆಂಡರ್ ನೋಟಿಫಿಕೇಷನ್ ಪ್ರಕಟವಾದ ದಿನ ಪತ್ರಿಕೆ ಮತ್ತು ದಿನಾಂಕ	:	ಪ್ರಜಾವಾಣಿ ದಿನ ಪತ್ರಿಕೆ ದಿ:05-10-2019
8.	ಟೆಂಡರ್ ಪತ್ರಕ್ಕೆ ಮನವಿ ಸ್ವೀಕರಿಸಿದ ಕೊನೆ ದಿ:		26-10-2019
10.	ಟೆಂಡರ್‌ನ್ನು ತೆರೆದ ದಿನಾಂಕ	:	28-10-2019
11.	ಟೆಂಡರ್ ಸಿಂಧುತ್ವದ ಅವಧಿ	:	90 ದಿವಸ

ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರ ಹೆಸರು ಮತ್ತು ನಮೂದಿಸಿರುವ ದರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ	ಗುತ್ತಿಗೆದಾರರ ಹೆಸರು	ಇ.ಎಂ.ಡಿ. ಬೇಕಾಗಿರುವ ಮೊತ್ತ	ಇ.ಎಂ.ಡಿ. ಪಾವತಿಯಾಗಿರುವ ಮೊತ್ತ	ಗುತ್ತಿಗೆದಾರರು ನಮೂದಿಸಿರುವ ದರಗಳು	ಟೆಂಡರ್‌ಗಿಟ್ಟ ಮೊತ್ತ 2018-19 ರ ಅನುಮೋದಿತ ಅಂದಾಜು ಮೊತ್ತ	ಅಂದಾಜಿಗೆ ಹೋಲಿಸಲಾದ ಶೇಕಡವಾರು
01	ಗೋವರ್ಧನ್.ಡಿ (GRD Developers and Construction)	18750.00	18750.00	1205161.00	1295918.00	-7.00% ಕಡಿಮೆ
02	ಪಿ.ರವಿಚಂದ್ರ	18750.00	18750.00	1399462.00	1295918.00	+7.99%ಹೆಚ್ಚು
03	ಎಸ್.ಸೋಮಶೇಖರ್	18750.00	18750.00	1410929.00	1295918.00	+8.87%ಹೆಚ್ಚು

ಪು.ತಿ.ನೋ

ಸಂಖ್ಯೆ

ಪಂಕ್ತಿಯ ಸಂಖ್ಯೆ

21

ಮೇಲ್ಕಂಡ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ, ಒಟ್ಟು ಮೂರುಜನ ಗುತ್ತಿಗೆದಾರರು ಭಾಗವಹಿಸಿದ್ದು ಅದರಲ್ಲಿ **ಶ್ರೀ.ಗೋವರ್ದನ್.ಡಿ (GRD Developers and Construction)**ರವರು ನಮೂದಿಸಿರುವ ದರಗಳು ಅನುಮೋದಿತ ಅಂದಾಜು ಪಟ್ಟಿ PWD SR 2018-19 ನೇ ಸಾಲಿನ ದರಗಳಿಗೆ ತುಲನೆ ಮಾಡಿದಾಗ **ಶೇಕಡ (-)7.00%** ಕಡಿಮೆ ದರಗಳನ್ನು ನಮೂದಿಸಿರುತ್ತಾರೆ. ಆದರೆ ಸದರಿ ಗುತ್ತಿಗೆದಾರರು ಟೆಂಡರ್ ಪರತ್ತಿನಂತೆ Class-III ಗುತ್ತಿಗೆದಾರರಾಗಿದ್ದು ಮೇಲ್ಕಂಡ ಕಾಮಗಾರಿಯು ರೂ.15.00 ಲಕ್ಷಗಳ ಕಾಮಗಾರಿಯಾಗಿರುವುದರಿಂದ Class-II ಅಥವಾ ಮೇಲ್ಪಟ್ಟ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕಾಗಿರುತ್ತದೆ. ಆದರೆ **ಶ್ರೀ.ಗೋವರ್ದನ್.ಡಿ (GRD Developers and Construction)**ರವರು Class-III ಗುತ್ತಿಗೆದಾರರಾಗಿರುವುದರಿಂದ ಸದರಿಯವರ ಬಿಡ್ಡನ್ನು ತಿರಸ್ಕರಿಸಲಾಗಿರುತ್ತದೆ. ಹಾಗೂ ಸದರಿಯವರು ನಮೂದಿಸಿರುವ ದರಗಳನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ.

(17)

ಮುಂದುವರೆದು ಸದರಿ ಕಾಮಗಾರಿಯು ಶುದ್ಧ ಕುಡಿಯುವ ನೀರಿನ ಘಟಕವನ್ನು ನಿರ್ಮಿಸುವ ಕಾಮಗಾರಿಯಾಗಿರುವುದರಿಂದ ಸದರಿ ಕಾಮಗಾರಿಯನ್ನು ಅತಿ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಪುನಃ ಟೆಂಡರ್ ಕರೆದು ಕಾಮಗಾರಿಯನ್ನು ಕೈಗೊಳ್ಳವುದು ವಿಳಂಭವಾಗುವ ಕಾರಣ ಹಾಗೂ ಸಮಯ ವ್ಯರ್ಥವಾಗುವ ಕಾರಣ ಎಲ್2 ಬಿಡ್ದುದಾರರು ತಾಂತ್ರಿಕವಾಗಿ ಅರ್ಹರಾಗಿದ್ದು ಸದರಿಯವರು ಕಾಮಗಾರಿಯ ಅಂದಾಜು ಮೊತ್ತಕ್ಕಿಂತ ಶೇಕಡ (+)7.99% ಹೆಚ್ಚಾಗಿ ನಮೂದಿಸಿರುತ್ತಾರೆ. ಎಲ್2 ಬಿಡ್ದುದಾರರಾದ **ಶ್ರೀ. ಪಿ.ಕೆವಿಚಂದ್ರ** ರವರಿಗೆ ಕಾಮಗಾರಿಯನ್ನು ವಹಿಸಲು ತಮ್ಮ ಮುಂದಿನ ಆದೇಶಕ್ಕಾಗಿ ಕಡತವನ್ನು ಸಲ್ಲಿಸಿದೆ.

(18)

ಕಾ.ಪಾ.ಅ(ಯ.ವಿ) 13/01/2020

(19)

ಮುಖ್ಯ ಅಭಿಯಂತರರು(ಯ.ವ)

ಗುತ್ತಿಗೆದಾರರಿಗೆ ಪತ್ರ ಜಾರಿ ಮಾಡಲಾಗಿದೆ.

(20)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮೇಲಿನ (18) ರಲ್ಲಿ ಸೂಚಿಸಿರುವಂತೆ L2 ಗುತ್ತಿಗೆದಾರರೊಂದಿಗೆ ಪತ್ರ ವ್ಯವಹಾರ ನಡೆಸಲು ದಿನಾಂಕ 21-01-2020 ರಂದು ಪತ್ರ ಬರೆಯಲಾಗಿದ್ದು, ಸದರಿ ಗುತ್ತಿಗೆದಾರರು ಶೇ 4.99% ಹೆಚ್ಚು ಪಡೆದಿರುವ ದರಪಟ್ಟಿಯನ್ನು ಸಲ್ಲಿಸಿದ್ದು ಪರಿಶೀಲಿಸಲಾಗಿದೆ. ಸದರಿ ಪಟ್ಟಿಯಲ್ಲಿ ಕಾಮಗಾರಿಯ ಅಂದಾಜು ಮೊತ್ತ 13,60,065/- ಗಳಿಗೆ ಬದಲಾಗಿ (13,60,000) ಗಳಿಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಪತ್ರ ವ್ಯವಹಾರ ನಡೆಸಲಾಗಿದೆ.

25/01/2020

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
(21)	ಮುಖ್ಯ ಅಭಿಯಂತರರು(ಯಲ) ಶ.ಚಪಡನ 23/1
(22)	EE(ಯಲ) ಚರ್ಚಿಸಲಾಗಿದೆ. ಮುಖ್ಯ ಅಭಿಯಂತರರು ಯಲಹಂಕ ವಲಯ ಬೃಪತ್ ಬೆಂಗಳೂರು ಮಹಾನಗರ ಪಾಲಿಕೆ
(23)	EE(ಯಲ)
(24)	ಕಂಡಿಕೆ ಮುಂದುವರೆದಂತೆ ಸದರಿ ಕಾಮಗಾರಿಗೆ ಸಂಬಂದಪಟ್ಟಂತೆ ಅತಿ ಕಡಿಮೆ ದರ ನಮೂಧಿಸಿರುವ ಎಲ್–1 ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹತೆ ಹೊಂದದೆ ಇರುವುದರಿಂದ ಸದರಿಯವರು ನಮೂದಿಸಿರುವ ದರಗಳನ್ನು ಪರಿಗಣಿಸದೇ ಎರಡನೇ ಅತಿ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರಾದ ಶ್ರೀ.ಪಿ.ರವಿಚಂದ್ರ ರವರು ನಮೂದಿಸಿರುವ ದರಗಳಿಗೆ ಅನುಮೋದನೆ ಕೋರಿ ಕಂಡಿಕೆ (19)ರಲ್ಲಿ ಮುಖ್ಯ ಅಭಿಯಂತರರು ಯಲಹಂಕ ವಲಯರವರಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸದರಿ ಪ್ರಸ್ತಾವನೆಗೆ ಮುಖ್ಯ ಅಭಿಯಂತರರು ಗುತ್ತಿಗೆದಾರರೊಂದಿಗೆ ದರ ಸಂದಾನ ನಡೆಸುವಂತೆ ತಿಳಿಸಿರುತ್ತಾರೆ. ಅದರಂತೆ ಗುತ್ತಿಗೆದಾರರಾದ ಶ್ರೀ.ಸುರೇಶ್ ಎನ್ ರವರೊಂದಿಗೆ ದರ ಸಂದಾನ ನಡೆಸಿದ್ದು, ದರ ಸಂದಾನದ ನಂತರ ರೂ. **13,60,065.00** ಗಳಿಗೆ (+)**4.95%** ಹೆಚ್ಚು ಅನುಮೋದನೆ ಕೋರಿ ಮತ್ತೊಮ್ಮೆ ಮುಖ್ಯ ಅಭಿಯಂತರರಿಗೆ ಕಂಡಿಕೆ (21)ರಲ್ಲಿ ಕಡತ ಸಲ್ಲಿಸಿದ್ದು, ದರ ಸಂದಾನದ ನಂತರದ ಮೊತ್ತ ರೂ. **13,60,065.00** ಗಳಿಗೆ ಅನುಮೋದನೆ ನೀಡಿರುತ್ತಾರೆ.
(25)	ಸರ್ಕಾರದ ಆದೇಶ ಸಂಖ್ಯೆ No PWD 65 RDF 2017 dt 11-10-2018 ರಂತೆ ಟೆಂಡರ್ ಮೊತ್ತಕ್ಕೆ ಶೇಕಡ 12% ಜಿ.ಎಸ್.ಟಿ ಶುಲ್ಕ ರೂ. 1,63,207.00 ಗಳನ್ನು ಸೇರಿಸಿ ಒಟ್ಟು ಮೊತ್ತ ರೂ. **15,23,272.00** ಗಳಾಗಿದ್ದು, ಅದಕ್ಕೆ ಗುತ್ತಿಗೆದಾರರು ಭದ್ರತಾ ಠೇವಣಿ ಶುಲ್ಕ (ಶೇಕಡ 5%) ಕ್ಕೆ ಟಿ.ಡಿ.ಆರ್ ನಂ **418650** ದಿನಾಂಕ: **12–02–2020** ವಿಜಯ ಬ್ಯಾಂಕ್ ವಿದ್ಯಾನಗರ ಬ್ರಾಂಚ್ ರೂ. **68,000.00** ಗಳನ್ನು ನೀಡಿರುತ್ತಾರೆ. ಆದುದರಿಂದ ಸದರಿ ಗುತ್ತಿಗೆದಾರರೊಂದಿಗೆ ಕರಾರು ಒಡಂಬಡಿಕೆ ಮಾಡಿ ಕಾರ್ಯಾದೇಶ ನೀಡಲಾಗಿದೆ. 19/02/2020 ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ

ಸಂಖ್ಯೆ

~~ಯಲಹಂಕ ವಿಭಾಗದ, ಯಲಹಂಕ ಉಪನಗರ ಉಪವಿಭಾಗದ ವಾರ್ಡ್ ನಂ:03, ಅಟ್ಟೂರು~~ ವ್ಯಾಪ್ತಿಯಲ್ಲಿ Construction of RO plant in ward no:03 ಕಾಮಗಾರಿಗೆ 2018-19ನೇ ಸಾಲಿನ Additional Works-2019 ರ ಅನುದಾನದಡಿಯಲ್ಲಿ ಲೆಕ್ಕಶೀರ್ಷಿಕೆ ಪಿ-3445 ಅಡಿಯಲ್ಲಿ **ರೂ.15.00** ಲಕ್ಷಗಳ ಅನುದಾನಕ್ಕೆ ಅನುಮೋದನೆಯಾಗಿದ್ದು, **003-19-000058** ರಂತೆ ಕಾಮಗಾರಿ ಸಂಕೇತ ಪಡೆದಿರುತ್ತದೆ. ಸದರಿ ಅಂದಾಜನ್ನು 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯನ್ನು ಅನುಸರಿಸಿಕೊಂಡು ತಯಾರಿಸಿದ್ದು, ವಿಭಾಗ ಕಛೇರಿ ಸಂಖ್ಯೆ:06/2019-20, ದಿ:28/05/2019 ರಲ್ಲಿ ತಾಂತ್ರಿಕ ಮಂಜೂರಾತಿ ಪಡೆದಿರುತ್ತದೆ. ಕಾಮಗಾರಿಯನ್ನು ಪಿ.ರವಿಚಂದ್ರ ಗುತ್ತಿಗೆದಾರರ ಮುಖಾಂತರ ನಿರ್ವಹಿಸಲಾಗಿದ್ದು, ವಿಭಾಗ ಕಛೇರಿ ವತಿಯಿಂದ ಸಂಖ್ಯೆ: BBMP/YNK-D/EPMT-10/W.O/244/2019-20, ದಿನಾಂಕ:19/02/2020 ರಲ್ಲಿ ಕಾರ್ಯಾದೇಶ ಪಡೆದಿರುತ್ತಾರೆ.

ಸದರಿ ಕಾಮಗಾರಿಯ ಅಂದಾಜಿನಲ್ಲಿ 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬರುವ ಬೆಸ್ಕ್ಕಾಂಟಿ-02 ರಲ್ಲಿ ಮಳೆನೀರು ಸರಾಗವಾಗಿ ಹರಿಯದೇ ಅಕ್ಕಪಕ್ಕದ ಸಾರ್ವಜನಿಕರಿಗೆ ತುಂಬಾ ಅನಾನುಕೂಲವಾಗುತ್ತಿರುವುದರಿಂದ ಮುಖ್ಯ ಅಭಿಯಂತರರು ಸ್ಥಳ ಪರಿವೀಕ್ಷಣೆ ನಡೆಸಿ ಸ್ಥಳಕ್ಕೆ ಅನುಗುಣವಾಗಿ ಕೆಲವೊಂದು ಮಾರ್ಪಾಡುಗಳನ್ನು ಮಾಡಲು ಮೌಖಿಕವಾಗಿ ಸೂಚಿಸಿರುವ ಮೇರೆಗೆ ಈ ಬಡಾವಣೆಗಳಲ್ಲಿ ಬರುವ ಅಡ್ಡರಸ್ತೆಗಳಲ್ಲಿ ಹೆಚ್ಚುವರಿಯಾಗಿ ಬಿಟುಮಿನಸ್ ಕಾಂಕ್ರೀಟ್ ಹಾಕಿರುವ ಅಂಶಕ್ಕೆ ಅಂದಾಜಿನಲ್ಲಿ ಅವಕಾಶ ಕಲ್ಪಿಸಿಕೊಂಡಿರುತ್ತದೆ.

ಸದರಿ ಕಾಮಗಾರಿಯನ್ನು ನಿರ್ವಹಿಸುವ ಸ್ಥಳವು 110 ಹಳ್ಳಿಗಳ ವ್ಯಾಪ್ತಿಯಲ್ಲಿನ ದೊಡ್ಡಬೆಟ್ಟಹಳ್ಳಿ ಗ್ರಾಮದಲ್ಲಿ ಬರುತ್ತಿದ್ದು, ಕಾಮಗಾರಿ ನಿರ್ವಹಿಸುವ ಸ್ಥಳದಲ್ಲಿ ಬೃಹತ್ ಗಾತ್ರದ ಆಲದ ಮರ ಇರುವುದರಿಂದ ಮಳೆಗಾಲದಲ್ಲಿ ಕೊಂಬೆಗಳು ಮುರಿದು ಬೀಳುವ ಸಂಭವವಿರುವುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಸ್ತುತ ಅಂದಾಜು ಪಟ್ಟಿಯಲ್ಲಿ ಇರುವ ಶೀಟ್‌ರೂಫ್ ಛಾವಣಿಯ ಬದಲು ಆರ್.ಸಿ.ಸಿ.ಛಾವಣಿ ರೂಫ್‌ನ್ನು ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವುದರ ಬಗ್ಗೆ ಮಾನ್ಯ ಪಾಲಿಕೆ ಸದಸ್ಯರ ಮನವಿಯ ಮೇರೆಗೆ (ಪ್ರತಿಯನ್ನು ಲಗತ್ತಿಸಿದೆ). ಕಾಮಗಾರಿ ನಿರ್ವಹಣೆಯನ್ನು ಸ್ಥಳಕ್ಕನುಗುಣವಾಗಿ ಅಂದಾಜು ಪಟ್ಟಿಯಲ್ಲಿನ ಮಂಜೂರಾದ ಪರಿಮಾಣಗಳಿಗಿಂತ ಕೆಲವು ಅಂಶಗಳು ಹೆಚ್ಚುವರಿ / ಕಡಿಮೆಯಾಗಿರುತ್ತದೆ. ಹೆಚ್ಚುವರಿಯಾಗಿ ನಿರ್ವಹಿಸಲು ಪರಿಮಾಣದ **Workslip ಮೊತ್ತವು ರೂ.88447.00 ಅಂದರೆ ಶೇ.6.74% ರಷ್ಟು ಗುತ್ತಿಗೆ ಮೊತ್ತವಾಗಿರುತ್ತದೆ.** ಆದ್ದರಿಂದ ಗುತ್ತಿಗೆದಾರರಿಗೆ ಅನುಮೋದನೆಯಾಗಿರುವ ಒಟ್ಟು ಟೆಂಡರ್ ಮೊತ್ತಕ್ಕಿಂತ ಒಟ್ಟಾರೆ ಶೇ.6.74% ರಷ್ಟು ಕಡಿಮೆಯಾಗಿರುತ್ತದೆ ಹಾಗೂ EIRL ಮೊತ್ತವು ರೂ.14246.73 ಅಂದರೆ ಶೇ.1.08% ರಷ್ಟು ಗುತ್ತಿಗೆ ಮೊತ್ತವಾಗಿರುತ್ತದೆ. ಆದ್ದರಿಂದ ಗುತ್ತಿಗೆದಾರರಿಗೆ ಅನುಮೋದನೆಯಾಗಿರುವ ಒಟ್ಟು ಟೆಂಡರ್ ಮೊತ್ತಕ್ಕಿಂತ ಒಟ್ಟಾರೆ ಶೇ.1.08% ಕಡಿಮೆಯಾಗಿರುತ್ತದೆ.

ಕಾಮಗಾರಿ ಸ್ಥಳಕ್ಕನುಗುಣವಾಗಿ ಈ ಅಂಶಗಳನ್ನು ನಿರ್ವಹಿಸಲಾಗಿದ್ದು, ವರ್ಕ್‌ಸ್ಲಿಪ್‌ನಲ್ಲಿ ವರದಿಯೊಂದಿಗೆ ಸಲ್ಲಿಸಿರುವ ಮಂಜೂರಾದ ಅಂದಾಜು ಪಟ್ಟಿಯ ಅಂಶಗಳು, ಕಾಮಗಾರಿ ನಿರ್ವಹಿಸಲು ಅಂಶಗಳನ್ನೊಳಗೊಂಡ ತುಲನಾತ್ಮಕ ಪಟ್ಟಿಯನ್ನು ತಮ್ಮ ಅವಗಾಹನೆಗೆ ಮಂಡಿಸುತ್ತಾ, ಅನುಮೋದಿತ ಟೆಂಡರ್ ಮೊತ್ತಕ್ಕಿಂತ **ಶೇ.0.07% ಕಡಿಮೆಯಾಗಿದ್ದು,** ನಿರ್ವಹಿಸಲು ಪರಿಮಾಣದ ಅಂಶಗಳಿಗೆ ಮಂಜೂರಾತಿ ನೀಡಲು ಕೋರಿ ಕಡತವನ್ನು ತಮ್ಮ ಘನ ಆದೇಶಕ್ಕಾಗಿ ಮಂಡಿಸಿದೆ.

ಸಹಾಯಕ ಅಭಿಯಂತರರು

ಸಹಾಯಕ ಕಾರ್ಯಪಾಲಕ ಅಭಿಯಂತರರು
ಯಲಹಂಕ ಉಪನಗರ ಉಪವಿಭಾಗ
ಬಿ.ಬಿ.ಎಂ.ಪಿ, ಬೆಂಗಳೂರು.

ಪು.ತಿ.ನೋ

ಟಿಪ್ಪಣಿಗಳು ಮತ್ತು ಆಜ್ಞೆಗಳು

ಪಂಕ್ತಿಯ ಸಂಖ್ಯೆ	
	ಕಂಡಿಕೆ (1) ರಿಂದ (3) ರಲ್ಲಿ ಉಲ್ಲೇಖಿಸಿರುವಂತೆ "Construction of R.O. plant in ward No-03" ರವರ ಕಛೇರಿಯಲ್ಲಿ ಕಿರಿಯ ಅಭಿಯಂತರರು ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿದ್ದರು. ಆದರೆ ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ಸೂಚಿಸಿರುವಂತೆ ಕೋಣೆಯ ಮೇಲ್ಛಾವಣಿಗೆ A.C. Sheet ಹೊದಿಸಲು ಅಂದಾಜು ಪಟ್ಟಿಯಲ್ಲಿ ಅಳವಡಿಸಿದ್ದು ಆದರೆ ಅಳವಡಿಸಿರುವ ಮೇಲ್ಛಾವಣಿಯು R.C.C ಆಗಿರುತ್ತದೆ.
(30)	ಆದ್ದರಿಂದ ಅಂದಾಜು ಪಟ್ಟಿಯಲ್ಲಿ A.C. Sheet Roof ಬದಲಾಗಿ R.C.C Roof ಗೆ ಸಂಬಂಧಿಸಿದ ಹೆಚ್ಚುವರಿ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಹೆಚ್ಚುವರಿ ಅಂದಾಜು ಪಟ್ಟಿಯಲ್ಲಿನ ಅಂಗಸ್ಟಿಪ್ ನ ಮೊತ್ತವು ₹ 8844/- ಗಳಿದ್ದು ಪ್ರಸ್ತುತ Tender ಮೊತ್ತಕ್ಕೆ ಹೆಚ್ಚುವರಿ 6.74 % ದಷ್ಟು ಹೆಚ್ಚಾಗುತ್ತಿದೆ. ಇನ್ನು EMD ಮೊತ್ತವು ₹ 14246.73/- ಗಳಿದ್ದು ಪ್ರಸ್ತುತ ಮೊತ್ತಕ್ಕೆ ಹೆಚ್ಚುವರಿ ಸದರಿ 1.08 % ದಷ್ಟಾಗುತ್ತದೆ.
(31)	ಆದುದರಿಂದ ಹೆಚ್ಚುವರಿ ಅಂದಾಜು ಪಟ್ಟಿಯಲ್ಲಿನ ಕಾಮಗಾರಿಯ ಪ್ರಥಮ ಹಂತದ ಬಿಲ್ಲಿನ ಪಾವತಿಯ ಸಮಯದಲ್ಲಿ ಹೆಚ್ಚುವರಿ ಅಂದಾಜು ಪಟ್ಟಿಯ ಮೊತ್ತವನ್ನು ತೆಗೆದುಕೊಳ್ಳಲು ಅನುಮತಿ ನೀಡಲು ಕೋರಿದೆ.
(32)	ಮೇಲ್ಕಂಡಂತೆ ಕಂಡಿಕೆ (1ರಿಂದ)

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ
ಬೆಂಗಳೂರು - 560064

ಕಂಡಿಕೆ 01 ರಿಂದ 06ರ ವರೆಗಿನ ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರು ವರದಿಯಂತೆ ಸದರಿ ಕಾಮಗಾರಿಯನ್ನು ಸ್ಥಳಕ್ಕನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸಲು ಅಂದಾಜು ಪಟ್ಟಿಯಲ್ಲಿನ ಮಂಜೂರಾದ ಪರಿಮಾಣಗಳಿಗಿಂತ ಕೆಲವು ಅಂಶಗಳು ಹೆಚ್ಚು/ಕಡಿಮೆಯಾಗಿರುತ್ತದೆ ಅದರಂತೆ ಸ್ಥಳಕ್ಕನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸಲು ಪರಿಮಾಣದ ಅಂಶಗಳು ಈ ಕೆಳಕಂಡಂತಿರುತ್ತದೆ.

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

1. ಕಾಮಗಾರಿಯ ಅಂದಾಜು ಮೊತ್ತ ರೂ.15.00ಲಕ್ಷಗಳು
2. ಮಾರ್ಪಾಡು ಅಂದಾಜು ಮೊತ್ತ ರೂ.13,13,238.26ಗಳು
3. ವರ್ಕ್ಸ್‌ಸ್ಲಿಪ್ ಮೊತ್ತ ರೂ.88,447.00(6.74%)
4. ಇಐಆರ್‌ಎಲ್ ಮೊತ್ತ ರೂ.14,246.75(1.08%)

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ದಿನಾಂಕ:04-02-2021ರಂತೆ ವರ್ಕ್ಸ್‌ಸ್ಲಿಪ್, ಇಐಆರ್‌ಎಲ್ ಮತ್ತು ಮಾರ್ಪಾಡು ಅಂದಾಜು ಮೊತ್ತಗಳು ಅನುಮೋದನೆಗೊಂಡ ಅಂದಾಜು ಮೊತ್ತದ ವ್ಯಾಪ್ತಿಯಲ್ಲಿರುವುದರಿಂದ ಪ್ರಸ್ತಾವನೆಯನ್ನು ಅನುಮೋದಿಸಿದೆ.

33) ಮು.ಕ್ರ (ಅಪ್ರ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

EE (Rjmk)

ಪು.ತಿ.ನೋ